ಇ) ಎಲೆಕ್ಟ್ರಿಕಲ್ .... ರೂ. 30,000 ವರ್ಷಕ್ಕೆ (ತೆರೆದಾಗ)
ಮೆಕಾನಿಕಲ್ .... ರೂ. 30 000 ವರ್ಷಕ್ಕೆ (ತೆರೆದಾಗ)
ಟೆಲಿಕಮ್ಯುನಿಕೇಷನ್ ರೂ. 30,000 ವರ್ಷಕ್ಕೆ (ತೆರೆದಾಗ)
ಸಿವಿಲ್ ತೆರೆಯಲು ತಗಲುವ ವೆಚ್ಚ ರೂ. 1,00,000 ವರ್ಷಕ್ಕೆ (ಈಗಿನ ಅಂದಾಜು)

ಈ) ಇದುವರೆವಿಗೂ ಯಾರಿಂದಲೂ ಬೇಡಿಕೆ ಇಲ್ಲದ ಕಾರಣ ಸಿವಿಲ್ ಇಂಜಿನಿಯರಿಂಗ್ ತರಗತಿಗಳನ್ನು ತೆರೆಯುವ ಪ್ರಸ್ತಾವನೆ ಇಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ ಎಲೆಕ್ಟ್ರಿಕಲ್ ಕೋರ್ಸನ್ನು ತೆರೆಯುವುದಕ್ಕೆ ಮೂವತ್ತು ಸಾವಿರ ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದೀರಿ. ಇದು ಮೆಷನರಿಗೆ ಖರ್ಚಾಗುತ್ತದೆಯೋ ಅಥವಾ ಯಾವುದಕ್ಕೆ ಖರ್ಚಾಗುತ್ತದೆ ಎನ್ನುವ ವಿವರ ಕೊಟ್ಟಿಲ್ಲ.

ಶ್ರೀ ಎಂ. ರಘುಪತಿ.—ವಿವರ ಕೊಡುವುದಕ್ಕೆ ಆಗುವುದಿಲ್ಲ. ಮೂವತ್ತು ಸಾವಿರ ರೂಪಾಯಿಗಳನ್ನು ಬೇಕಾದ ಮಿಷನರಿಗೆ, ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ಖರ್ಚಾಗುತ್ತದೆ. ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಖರ್ಚಾಗುತ್ತದೆ ಎನ್ನುವ ವಿವರವನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ —ಸಿವಿಲ್ ಇಂಜಿನಿಯರಿಂಗ್‌ಗೆ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದಿದ್ದೀರಿ, ಅದು ಹೇಗೆ ?

ಶ್ರೀ ಎಂ. ರಘುಪತಿ.—ಇಂಜನಿಯರಿಂಗ್ ಕೋರ್ಸ್‌ಗಳಿಗೆ ಹೆಚ್ಚಿನ ಉಪಾಧ್ಯಾಯರು ಬೇಕಾಗುತ್ತಾರೆ, ಸಲಕರಣೆಗಳು ಬೇಕಾಗುತ್ತವೆ, ಮೆಷಿನರಿ ಹೆಚ್ಚಾಗಿ ಬೇಕಾಗುತ್ತದೆ, ಅದಕ್ಕೋಸ್ಕರ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಮೆಷಿನರಿಗಳ ಅವಶ್ಯಕತೆ ಇಲ್ಲ ಎಲ್ಲಾ ರೆಡಿ ಇರುವುದರಿಂದ ಒಂದು ಲಕ್ಷ ರೂಪಾಯಿ ಖರ್ಚು ಹೇಗೆ ಆಗುತ್ತದೆ ?

ಶ್ರೀ ಎಂ. ರಘುಪತಿ.—ಇದು ತಾಂತ್ರಿಕ ತಜ್ಞರ ಅಭಿಪ್ರಾಯ. ಅದರ ವಿವರವನ್ನು ನಾನು ಕಳುಹಿಸಿಕೊಡುತ್ತೇನೆ. ಆಗ ನಿಮಗೇ ಗೊತ್ತಾಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.—ಎಲೆಕ್ಟ್ರಿಕಲ್, ಮೆಕಾನಿಕಲ್ ಹಾಗೂ ಟೆಲಿ ಕಮ್ಯುನಿಕೇಷನ್ ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಜಾಬ್ ಓರಿಯೆಂಟೆಡ್ ಸ್ಕೀಮ್‌ನಲ್ಲಿ ಯಾವ ಯಾವ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ರಘುಪತಿ.—ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.

ಶ್ರೀ ಆರ್. ಎನ್. ನಾಯಕ್.—ಮಂತ್ರಿಗಳು ಹೇಳಿದರು, ಸಿವಿಲ್ ಇಂಜಿನಿಯರಿಂಗ್ ಕೋರ್ಸ್ ನಡೆಸಬೇಕಾದರೆ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಸಿವಿಲ್ ಇಂಜಿನಿಯರಿಂಗ್ ಕೋರ್ಸ್ ನಡೆಯುತ್ತಿರುವುದನ್ನು ಈಗಾಗಲೇ ಕ್ಲೋಸ್ ಮಾಡಿದ್ದಾರೆ. ಖರ್ಚಾಗುತ್ತಿರುವ ಸಂದರ್ಭವೆಲ್ಲಿ ಬಂತು ?

ಶ್ರೀ ಎಂ. ರಘುಪತಿ.—ಆ ಕೋರ್ಸನ್ನು ಕ್ಲೋಸ್ ಮಾಡಿಲ್ಲ.

ವಿಷಯ : ಮೆಟ್ರಿಕ್ ಹಾಗೂ ಮೆಟ್ರಿಕ್ ನಂತರದ ಪರೀಕ್ಷೆಗಳಲ್ಲಿ ನಡೆಯುತ್ತಿರುವ ಅವ್ಯವಹಾರಗಳ

ಪ್ರ. ಸಂಖ್ಯೆ 44 (111) ಡಾ॥ ಬಿ.ಎಂ. ತಿಪ್ಪೇಸ್ವಾಮಿ (ಭರಮಸಾಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೆಟ್ರಿಕ್ ಮತ್ತು ಮೆಟ್ರಿಕ್ ಪರೀಕ್ಷೆಗಳನ್ನು ನಡೆಸುವಾಗ ಸಂಭವಿಸುವ ಅವ್ಯವಹಾರಗಳಿಗೆ ಕಾರಣಗಳು (ಕಳೆದ ಮೂರು ವರ್ಷಗಳಿಗೆ ಸಂಬಂದಿಸಿದಂತೆ ;

ಆ) ಎಸ್.ಎಸ್.ಎಲ್.ಸಿ ಪಿ.ಯು.ಸಿ. ಮತ್ತು ಇತರ ಪಬ್ಲಿಕ್ ಪರೀಕ್ಷೆಗಳಿಗೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗುವುದಕ್ಕೆ ಮೂಲಗಳು (ಮೇಲಿ ಕಾಣಿಸಿದ ವರ್ಷಗಳಿಗೆ ಸಂಬಂಧಿಸಿದಂತೆ)?

ಇ) ಮೇಲಿನ ಅವ್ಯವಹಾರಗಳನ್ನು ತಾಪ್ಪಿಸಲು ತೆಗೆದುಕೊಂಡ ಕ್ರಮಗಳು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ವಿದ್ಯಾರ್ಥಿಗಳಿಗೆ ಕಾನೂನು ಬಾಹಿರವಾಗಿ ದೊರೆಯಬಹುದಾದ ಅನುಕೂಲಗಳೇ ಈ ಅವ್ಯವಹಾರಗಳಿಗೆ ಕಾರಣಗಳು.

ಆ) ಇದನ್ನು ಪತ್ತೆ ಹಚ್ಚಲು ಸಿ.ಐ.ಡಿ.ಗೆ ಒಪ್ಪಿಸಲಾಗಿದೆ. ಸಿ.ಐ.ಡಿ. ಯಿಂದ ವರದಿ ಬಂದ ಮೇಲೆ ಪ್ರಶ್ನೆ ಪತ್ರಿಕೆ ಹೊರಬಿದ್ದ ಕಾರಣ ತಿಳಿಯುವುದು.

ಇ) ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.—

1) ಹಲವಾರು ಸೆಟ್ಟುಗಳ ಪ್ರಶ್ನೆಪತ್ರಿಕೆಗಳನ್ನು ತಯಾರಿಸಿ ಅವುಗಳಲ್ಲಿ ಒಂದು ಸೆಟ್ಟನ್ನು ಮಾತ್ರ ಉಪಯೋಗಿಸಲಾಗುವುದು.

2) ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರದಲ್ಲಿ ಇಡದೆ ಖಜಾನೆ ಮತ್ತು ಪೋಲೀಸ್ ಠಾಣೆಯಲ್ಲಿ ಇಡಲಾಗುತ್ತಿದೆ.

3) ಕೇಂದ್ರವಾರುಗಳಿಗೆ ಬೇಕಾದ ಪ್ರಶ್ನೆ ಪತ್ರಿಕೆಗಳನ್ನು ಮುದ್ರಣಾಲಯದಲ್ಲಿಯೇ ಪ್ಯಾಕ್ ಮಾಡಲಾಗುವುದು.

4) ಬೆಂಗಳೂರು ಮತ್ತು ಇತರ ಪ್ರಮುಖ ನಗರಗಳಲ್ಲಿ ಪ್ರಶ್ನೆಗಳ ಲಕೋಟೆಗಳನ್ನು ಆಯಾ ಪರೀಕ್ಷೆಯ ದಿನವೇ ವಿತರಣೆ ಮಾಡಲಾಗುತ್ತಿದೆ.

5) ಪದವಿ ಪೂರ್ವ ಶಿಕ್ಷಣ ಮತ್ತು ಎಸ್.ಎಸ್.ಎಲ್.ಸಿ ಪರೀಕ್ಷೆಗಳಲ್ಲಿ ಮಾರ್ಪಾಡು ಮಾಡಲು ಮತ್ತು ಉತ್ತಮಪಡಿಸುವ ಬಗ್ಗೆ ಸಲಹೆ ಮಾಡಲು ಡಾ॥ ಹೆಚ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ.

ಡಾ॥ ಬಿ.ಎಂ. ತಿಪ್ಪೇಸ್ವಾಮಿ.—ಮೊದಲನೇ ಪ್ರಶ್ನೆಗೆ causes for malpractices is for gaining unlawful advahtage on the part of the students ಎಂದು ಉತ್ತರ ಹೇಳಿದ್ದಾರೆ. ಈ malpracticesಗೆ ಕಾರಣ ಒಂದು ಹೈಸ್ಕೂಲಿನಲ್ಲಿ ನನಗೆ ತಿಳಿದ ಮಟ್ಟಿಗೆ. lack of experienced teachers. ಅವರುಗಳು ಪಾಠ ಸರಿಯಾಗಿ ಮಾಡದೆ ಸಮಯ ಹಾಳು ಮಾಡಿ ಪರೀಕ್ಷೆಯ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಮೇಕಪ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಶ್ರೀ ಮಾನ್ ರಾಚಯ್ಯನವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಈ ದಂಡ ಹಾಕುವ ಸಲಹೆಯನ್ನು ಇಡಲಾಗಿತ್ತು. ಸರ್ಕಾರಿ ಹೈಸ್ಕೂಲ್‌ಗಳಲ್ಲಿ ಬರೀ ಪತ್ತು ಪರ್‌ಸೆಂಟ್ ಬಂದರೆ ಅವರಿಗೆ ಶಿಕ್ಷೆ ಮಾತ್ರ ಆಲ್ಲ, ಅನುದಾನ ಕೂಡ ಸಿಕ್ಕುವುದಿಲ್ಲ. ಖಾಸಗಿ ಶಾಲೆಗಳಲ್ಲಿ ಇಪ್ಪತ್ತು ಪರ್‌ಸೆಂಟ್ ಒಳಗಡೆ ಎಸ್.ಎಸ್.ಎಲ್ ಸಿ. ರಿಸಲ್ಟ್ ಬಂದರೆ ಅವರಿಗೆ ಸಂಬಳದಲ್ಲಿ ಕಟ್ ಮಾಡುತ್ತಾರೆ. ಈ ವ್ಯವಸ್ಥೆ ಇರುವುದರಿಂದ ಖಾಸಗೀ ಶಾಲೆಗಳವರು ಸೇರಿಕೊಂಡು ಹದಿನೈದು ಇಪ್ಪತ್ತು ಮೈಲಿ ದೂರಕ್ಕೆ ಸೆಂಟರ್ ಬದಲಾಯಿಸಿ ಪರೀಕ್ಷೆಯಲ್ಲಿ ಬೋರ್ಡ್ ಮೇಲೆ ಬರೆದು ಪರ್‌ಸೆಂಟೇಜ್ ಇಪ್ಪತ್ತೈದರಿಂದ ಆರವತ್ತು, ತೊಂಬತ್ತರವರೆಗೆ ಬರುವಂತೆ ಮಾಡುತ್ತಾರೆ, ಸರ್ಕಾರಿ ಶಾಲೆಗಳಲ್ಲಿ 15ರಿಂದ 18 ಅಥವಾ 20 ಬರುತ್ತದೆ, ಈ ಪೀನಲ್ ಕಟ್ ಬಗ್ಗೆ ಮಾನ್ಯ ರಾಚಯ್ಯನವರನ್ನು ಕೇಳಿದಾಗ ನಮಗೆ ಏನಾದರೂ ಒಂದು ಹೋಲ್ಡ್ ಬೇಕು ಆದ್ದರಿಂದ ಅದನ್ನು ಇಟ್ಟುಕೊಂಡಿದ್ದೇವೆ ಎಂದು ಹೇಳಿದರು. ಈ ಹೋಲ್ಡ್ ಮೂಲ್‌ಪ್ರಾಕ್ಟೀಸ್‌ಗೆ ಅವಕಾಶ ವಾಗುತ್ತದೆ. ಅಲ್ಲಿ ಅದಕ್ಕೇ ಅವರು ಕಾರಣವನ್ನು ಕೊಟ್ಟಿಲ್ಲ.

ಅಧ್ಯಕ್ಷರು.—ಡಾಕ್ಟರೇ, ತಮ್ಮದು ಭಾಷಣವಾಯಿತು.

ಡಾ. ಬಿ.ಎಂ. ತಿಪ್ಪೇಸ್ವಾಮಿ.—ಕಾರಣ ಕೊಡದೇ ಇದ್ದರೆ ನಾವು ಏನು ಮಾಡುವುದು. ಮೂಲ್ ಪ್ರಾಕ್ಟೀಸ್ ಆಗುವುದಕ್ಕೆ ವಿದ್ಯಾರ್ಥಿಗಳು ಕಾರಣರಲ್ಲ ; ಮ್ಯಾನೇಜ್‌ಮೆಂಟ್ ಮತ್ತು ಉಪಾಧ್ಯಾಯರು ಗಳು ಎರಡನೆ ಪ್ರಶ್ನೆಯಲ್ಲಿ, ಪ್ರಶ್ನೆ ಪತ್ರಿಕೆ ಬಹಿರಂಗವಾಗುವುದಕ್ಕೆ ಸೋರ್ಸಸ್ ಆಫ್ ಲೀಕೇಜ್ ಆಫ್ ಕ್ವಶ್ಚನ್ ಪೇಪರ್ಸ್ ಯಾವುದು ಎಂದು ನಾನು ಕೇಳಿರುವುದು. ಸೋರ್ಸಸ್ ಆಫ್ ಲೀಕೇಜ್ ಬಗ್ಗೆ ಸರ್ಕಾರದವರು ಏನೂ ಕ್ರಮ ತೆಗೆದುಕೊಂಡಿಲ್ಲ. ಈ ರೀತಿ ಬಹಿರಂಗವಾಗಿರುವುದು ಕಳೆದ ಹದಿನಾರು ವರ್ಷಗಳಿಂದಲೂ ನಡೆಯುತ್ತಿದೆ. ಅದನ್ನು ಸಿ.ಐ.ಡಿ.ಯವರಿಗೆ ಒಪ್ಪಿಸಿದರೆ ಅವರಿಗೆ ತಾನೇ ಹೇಗೆ ಗೊತ್ತಾಗುತ್ತದೆ ? ಅವರಿಗೆ ಗೊತ್ತಾಗುವುದಿಲ್ಲ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಅವರು ಹೇಳಿದಂತೆ ಹಲವಾರು ಕಾರಣಗಳು ಇರಬಹುದು. ಇಲ್ಲ ಎಂದು ಹೇಳಲಿಕ್ಕಾಗುವುದಿಲ್ಲ. ಆದರೆ ಅವರು ಈ ಒಂದು ಮಾತನ್ನು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪರೀಕ್ಷೆಯಲ್ಲಿ ಇಷ್ಟು ಪರ್‌ಸೆಂಟೇಜ್ ಪಾಸ್ ಆದರೆ ಮಾತ್ರ ಅನುದಾನ ಕೊಡುತ್ತೇವೆಂದು ಇರತಕ್ಕ ನಿಯಮಾವಳಿ ಬೇಕಾದರೆ ರದ್ದು ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡು ತ್ತದೆ. ಎರಡನೆಯದು ಸಿ.ಐ.ಡಿ.ಯವರಿಗೆ ನಾವು ರೆಫರ್ ಮಾಡಿದ್ದೇವೆ. ಇದುವರೆವಿಗೆ ಅದು ನಡೆದು ಕೊಂಡು ಬಂದಿರಬಹುದು, ಇದು ಪೊನ್ನೆ ತಾನೇ ನಮಗೆ ಗೊತ್ತಾಯಿತು. ಆದ್ದರಿಂದ ಇದನ್ನು ಸಿ.ಐ.ಡಿ.ಯವರಿಗೆ ರೆಫರ್ ಮಾಡಿಸಿದ್ದೇವೆ. ಅವರಿಂದ ವರದಿ ಬಂದ ಕೂಡಲೇ ತಕ್ಕ ಕ್ರಮ ತೆಗೆದು ಕೊಳ್ಳುತ್ತೇವೆ. ಯಾವ ಸೋರ್ಸಸ್‌ನಿಂದ ಪ್ರಶ್ನೆಪತ್ರಿಕೆಗಳು ಬಹಿರಂಗವಾಗಿದೆ ಎನ್ನುವುದು ಗೊತ್ತಾಗು ತ್ತದೆ. ಅವರಿಗೆ ಒಪ್ಪಿಸದೇ ಯಾವ ರೀತಿ ಬಹಿರಂಗವಾಗಿದೆ ಎಂದು ಹೇಳುವುದು ಸಾಧ್ಯವಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನನ್ನದೊಂದು ಪ್ರಶ್ನೆ, ನಾನು ಆಗಲಿನಿಂದಲೂ ಸಮ್ಮನೆ ಕುಳಿತಿದ್ದೇನೆ, ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಬೇರೆಯವರು ಕೇಳಿದ ಹಾಗೆಲ್ಲ ಅವರಿಗೆ ಅವಕಾಶ ಕೊಡುತ್ತೀರಿ. ನನಗೆ ಮಾತ್ರ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು.—ಮತ್ತೊಮ್ಮೆ ಹೇಳಬೇಕಾಗುತ್ತದೆ. ಹೀಗೇ ಮುಂದುವರಿದರೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಡಾ॥ ಬಿ.ಎಂ. ತಿಪ್ಪೇಸ್ವಾಮಿ.—ನನ್ನದು ಇನ್ನೂ ಮುಗಿದಿಲ್ಲ. ಮಾನ್ಯ ವಿದ್ಯಾಮಂತ್ರಿಗಳು ಸಿ.ಓ.ಡಿ. ರಿಪೋರ್ಟ್ ಬರಲಿ ಎಂದು ಹೇಳಿದ್ದಾರೆ ; ಅದರಲ್ಲಿ ಸೋರ್ಸಸ್ ಆಫ್ ಕ್ವೆಶ್ಚನ್ ಪೇಪರ್ಸ್ ಲೀಕೇಜ್ ಏನು ಎಂದು ನಾನು ಕೇಳಿರುವುದು. ಸಿ.ಓ.ಡಿ.ಯವರು ಹೇಳುತ್ತಿದ್ದಾರೆಂದು ಕ್ವೆಶ್ಚನ್ ಪೇಪರ್ ಸೆಟ್ ಮಾಡುವುದಕ್ಕೆ ಬರಲಿಲ್ಲ, ಸಿ.ಓ.ಡಿ.ಯವರು ಪ್ರಿಂಟಿಂಗ್ ಪ್ರೆಸ್‌ಗೆ ಹೋಗಿ ಎನ್‌ಕ್ವೈರಿ ಮಾಡಿದರೂ ಗೊತ್ತಾಗುವುದಿಲ್ಲ. ಸರಿಯಾದ ಟೈಮಿನಲ್ಲಿ ಮಾಡಬೇಕಾಗಿತ್ತು. ಎಕ್ಸಾಮಿನೇಷನ್ ನಲ್ಲಿ ಒಮ್ಮೆ, ಪ್ರಿಂಟಿಂಗ್ ಪ್ರೆಸ್‌ನಲ್ಲಿ ಎರಡುಸಲ..... .....

ಶ್ರೀ ಜೆ.ಹೆಚ್. ಪಟೀಲ್.—ಅಧ್ಯಕ್ಷರೇ, ಈ ವಿಷಯವನ್ನು ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯರು ಪ್ರಸ್ತಾಪಿಸುವ ಬದಲು ಇದಕ್ಕೆಂದೇ ಒಂದು ಅರ್ಧ ಗಂಟೆ ಚರ್ಚೆಯ ಅವಧಿಯಲ್ಲಿ ಮಾಡಿದ್ದರೆ ಸರಿಯಾಗುತ್ತಿತ್ತು.

ಅಧ್ಯಕ್ಷರು.—ಶ್ರೀ ತಿಪ್ಪೇಸ್ವಾಮಿಯವರು ಇದಕ್ಕೆ ಬೇರೆ ನೋಟಿಸ್ ಕೊಡಲಿ.

ವಿಷಯ.—ಪಶುಸಂಗೋಪನಾ ಇಲಾಖೆಯಲ್ಲಿನ ಸಿಬ್ಬಂದಿಯ ಸೇವಾ ಸ್ಥಿತಿ

ಪ್ರ. ಸಂಖ್ಯೆ 48 (157) ಶ್ರೀ ಕೆ. ವಸಂತ ಬಂಗೇರಾ (ಬೆಳ್ತಂಗಡಿ).—ಮಾನ್ಯ ಪಶುಸಂಗೋಪನಾ ಹಾಗೂ ಪಶುವೈದ್ಯ ಸೇವೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಪಶುಸಂಗೋಪನಾ ಇಲಾಖೆಯಲ್ಲಿ ಡಾಕ್ಟರೇಟ್ ಪಡೆದವರ ಹಾಗೂ ಸ್ನಾತಕೋತ್ತರ ಪದವೀಧರರ ಸಂಖ್ಯೆ ಎಷ್ಟು ;

ಆ) ಡಾಕ್ಟರೇಟ್ ಪಡೆದವರು ಹಾಗೂ ಸ್ನಾತಕೋತ್ತರ ಪದವೀಧರರು ಸಹಾಯಕ ಪಶುವೈದ್ಯಾಧಿಕಾರಿಗಳಾಗಿ ಹಾಗೂ ಸಹಾಯಕ ನಿರ್ದೇಶಕರುಗಳಾಗಿ ಈಗಾಗಲೇ 10-15 ವರ್ಷಗಳ ಸೇವೆ ಸಲ್ಲಿಸಿದ್ದರೂ ಕೂಡ ಇನ್ನೂ ಮುಂದೆಯೂ ಅದೇ ಹುದ್ದೆಯಲ್ಲಿಯೇ ನಿವೃತ್ತಿಯಾಗುವವರೆಗೆ ಸೇವೆ ಸಲ್ಲಿಸಬೇಕಾಗಿದ್ದು ಅವರುಗಳಿಗೆ ಸೇವೆಯಲ್ಲಿ ಯಾವುದೇ ಉತ್ಸಾಹವಿರುವುದು ಹಾಗೂ ಈ ಎಲ್ಲಾ ಹೆಚ್ಚಿನ ವಿದ್ಯಾಭ್ಯಾಸ ಮಾಡಿದವರಿಗೆ ಯಾವ ರೀತಿಯ ಪ್ರತ್ಯೇಕ ಅಥವಾ ವಿಶೇಷವಾದ ಹುದ್ದೆಯನ್ನಾಗಲೀ ಜವಾಬ್ದಾರಿಯನ್ನಾಗಲೀ ಕೊಟ್ಟಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ ಅವರುಗಳ ಪದವಿ ಹಾಗೂ ಸೇವೆಯ ಅವಧಿಗನುಸಾರವಾಗಿ ಮುಂಬಡ್ತಿ ಹಾಗೂ ಉನ್ನತ ದರ್ಜೆಯ ಹುದ್ದೆಗಳನ್ನು ಕಲ್ಪಿಸುವುದಕ್ಕೆ ಮತ್ತು ಉನ್ನತ ಶ್ರೇಣಿಯ ವೇತನವನ್ನು ಒದಗಿಸುವುದಕ್ಕೆ ಸರ್ಕಾರ ಈ ಕೂಡಲೇ ಕ್ರಮ ಕೈಗೊಳ್ಳುವುದೇ ?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನಾ ಮತ್ತು ಪಶುವೈದ್ಯಸೇವಾ ರಾಜ್ಯ ಸಚಿವರು).—

ಅ) ಪಶುಸಂಗೋಪನಾ ಇಲಾಖೆಯಲ್ಲಿ 124 ಮಂದಿ ಸ್ನಾತಕೋತ್ತರ ಪದವೀಧರರು ಹಾಗೂ ಇಬ್ಬರು ಡಾಕ್ಟರೇಟ್ ಪಡೆದವರು ಇರುತ್ತಾರೆ.

ಆ) ಹೌದು. ಸ್ನಾತಕೋತ್ತರ ಪದವೀಧರರು ಮತ್ತು ಡಾಕ್ಟರೇಟ್ ಪಡೆದವರಿಗೆಂದೇ ಹಾಲಿ ಚಾಲ್ತಿಯಲ್ಲಿರುವ ಸಿ ಅಂಡ್ ಆರ್ ರೂಲ್ಸ್‌ನಲ್ಲಿ ಹುದ್ದೆ ಅಥವಾ ಬಡ್ತಿಯ ಅವಕಾಶ ಕಲ್ಪಿಸಲಾಗಿಲ್ಲ. ಆದರೂ ಮೇಲ್ದರ್ಜೆ ಹುದ್ದೆಗಳು ಖಾಲಿಯಾದಂತೆಲ್ಲಾ ಸೇವಾ ಪರಿಷ್ಕತೆಯ ಆಧಾರದ ಮೇಲೆ ಬಡ್ತಿ ಪಡೆಯುತ್ತಾರೆ. ಇಲಾಖೆಯಲ್ಲಿ ಸ್ನಾತಕೋತ್ತರ ಪದವೀಧರರಿಗೆ ವಿಶೇಷವಾದ ಹುದ್ದೆ ಅಥವಾ ಹೊಣೆಗಾರಿಕೆ ನೀಡಲು ಗೊತ್ತುಪಡಿಸಿಲ್ಲ.

ಹುದ್ದೆಗೆ ಅವಶ್ಯವಾದ ಮೂಲ ಬಿ.ಎ.ವಿಸ್.ಸಿ. ಪದವಿ ವಿದ್ಯಾರ್ಹತೆಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಆದಾಗ್ಯೂ ಹುದ್ದೆಗಳಿಗೆ ನೇಮಿಸುವಾಗ ಅಂತಹ ವಿಶೇಷ ವಿದ್ಯಾರ್ಹತೆಯನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಸಂಬಂಧಪಟ್ಟಂತಹ ವಿಶಿಷ್ಟ ಕ್ಷೇತ್ರ (ಹುದ್ದೆ) ಗಳಲ್ಲಿ ನೇಮಿಸಿಕೊಳ್ಳಲಾಗುವುದು.